

ಹಸಿರಿನಿಂದ ಕಂಗೊಳಿಸುವ ಕುದುರೆಮುಖ

# ನಮ್ಮೂರ ಆಷಾಢದಮ್ಮನ ಹಬ್ಬ

ತಣ್ಣಗೆ ಮಲಗಿರುವ ಮಲೆನಾಡ ಸೆರಗಿನ ಈ ಹಳ್ಳಿಗೆ ವಿಶೇಷ ಕಳೆ ಬರುವುದು ಆಷಾಢ ಮಾಸದಲ್ಲಿ. ಊರಿಗೆ ಊರೇ ಸಂಭ್ರಮದಲ್ಲಿ ಪಾಲ್ಗೊಳ್ಳುವ ಇಲ್ಲಿನ ವಿಶಿಷ್ಟ ಆಚರಣೆಯೊಂದರ ಒಲವು ನಲಿವಿನ ಬಗೆಯನ್ನು ಚಿಕ್ಕಮಗಳೂರಿನ ಭಾಷೆಯಲ್ಲಿ ತೆರೆದಿಟ್ಟಿದ್ದಾರೆ

ಶಾಂತಾ ಜಯಾನಂದ

ಆಷಾಢ ಮಾಸ, ಜಡಿಹಿಡಿದ ಮಳೆ, ಮೋಡಗಟ್ಟಿದ ಆಗಸ, ಸೂರ್ಯನಿಗೆ ಜಾಗ ಕೊಟ್ಟರೆ ತಮ್ಮ ಅಸ್ತಿತ್ವಕ್ಕೆ ಎಲ್ಲಿ ಧಕ್ಕೆ ಬರುತ್ತದೋ ಎಂದು ದಟ್ಟೈಸುತ್ತಲೇ ಇರುವ ಮೋಡಗಳು. ಇಂತಹ ಆಷಾಢ ಮಾಸದಲ್ಲಿ ವಿಶಿಷ್ಟವಾದ ಹಬ್ಬವನ್ನು ಆಚರಿಸುವುದು ನಮ್ಮೂರಿನ ಸಂಪ್ರದಾಯ. ನಮ್ಮೂರು ಮಲೆನಾಡಿನ ಸೆರಗಿನಲ್ಲಿರುವ ಒಂದು ಕುಗ್ರಾಮ. ನಾನು ಇದೊಂದು ಕುಗ್ರಾಮ ಅಂತ ಹೇಳಿದ್ದಕ್ಕೆ ಅಲ್ಲೇ ಇದ್ದ ಕೆಲವರು ‘ಅಯ್ಯೋ ಅದ್ನ ಕುಗ್ರಾಮ ಅಂತ ಯೋಳ್ಬೇಡವ್ವ’ ಎಂದಾರು.

ಇದ್ನ ಮೊದ್ಲಿಂದಲೂ ಕರೆಯೋದು ಬಿಗ್ಗನಳ್ಳಿ ಪ್ಯಾಟೆ ಅಂತ್ಲೆ. ಎತ್ಲಾಗಿಂದ ಪ್ಯಾಟೆಯೋ ನಾ ಕಣೆ. ಆದ್ರೆ ಇಲ್ಲಿ ಒಂದು ಒಳ್ಳೆಯ ಶಾಲೆ ಇದೆ. ಅದರ ಗಾಂಭೀರ್ಯವನ್ನು, ಸ್ವಚ್ಛತೆಯನ್ನು ಉಳುಸ್ಕೊಂಡು ಬಂದಿದೆ. ಇಲ್ಲಿ ಓದಿದ ಬಹಳ ಜನ ವಿದ್ಯಾವಂತರಾಗಿ ಚನ್ನಾದ ಜೀವನ ಕಟ್ಟಿಕೊಂಡಿದ್ದಾರೆ. ಶಾಲೆಯ ಮುಂದಕ್ಕೆ ಅರಳಿ ಮರ, ಬೇವಿನಮರ ಹಾಕಿ ಅದಕ್ಕೊಂದು ಕಟ್ಟೆ ಕಟ್ಟಿದ್ದಾರೆ. ಆಗ ಮರ ಹಾಕ್ಸಿ ಅವೆರಡಕ್ಕೆ ಮದ್ವೆ ಮಾಡಿದ್ದರಂತೆ. ಊರೂರಿಗೆ ಊಟ ಹಾಕ್ಸಿದ ಮದುವೆಯ ಸೊಬಗನ್ನು ಈಗ್ಲೂ ಕೆಲೂರು ನೆಪ್ಪಿಟ್ಕಂಡಿದ್ದಾರೆ. ಅದರ ಸುತ್ತ ಚಂದಕ್ಕೆ ಕಟ್ಟೆ ಹಾಕ್ಸಿ ಊರಿಗೆ ಬರೋರಿಗೆ, ಹೋಗೋರಿಗೆ, ಬಸ್ಸಿಗೆ ಕಾಯೋರಿಗೆ ಒಂದು ತಂಗುದಾಣವೂ ಕಟ್ಸಿದರನ್ನಿ. ಎಲ್ಲದಕ್ಕೂ ಊರವರದ್ದೇ ಮುಂದಾಳತ್ವ. ಈ ಮರಗಳೊಂದಿಗೆ ವಂಶದವರು, ನಾಗರಕಲ್ಲು ಪ್ರತಿಷ್ಠಾಪನೆ ಮಾಡವ್ರೆ. ಒಂದು ಆಸ್ಪತ್ರೆಯೂ ಇದೆ. ಅದು ತನ್ನ ಶಿಸ್ತನ್ನು ಕಾಪಾಡಿಕೊಂಡಿದೆ.

ಇದಕ್ಕೂ ಆಷಾಢ ಹಬ್ಬಕ್ಕು ಸಂಬಂಧ ಏನವ್ವ